## ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 83 ಕವಿಇ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:14.08.2019

## ಅಧಿಸೂಚನೆ

ವಿಷಯ: ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಉಪ ನಿರ್ದೇಶಕರ ವೃಂದದ ಪರಿಷ್ಕೃತ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: (1) ಸರ್ಕಾರದ ಅಧಿಸೂಚನೆ ಸಂ:ಆಇ 83 ಕವಿಇ 2017, ದಿ:11.01.2018.

(2) ಸರ್ಕಾರದ ಆದೇಶ ಸಂ:ಸಿಆಸುಇ 186 ಎಸ್‌ಆರ್ ಎಸ್ 2018, ದಿ:27.02.2019.

(3) ಸರ್ಕಾರದ ಆದೇಶ ಸಂ:ಸಿಆಸುಇ 186 ಎಸ್‌ಆರ್ ಎಸ್ 2018, ದಿ:15.05.2019.

(4) ಸರ್ಕಾರದ ಅಧಿಸೂಚನೆ ಸಂ:ಆಇ 83 ಕವಿಇ 2017, ದಿ:26.07.2019.

* * *

ಶ್ರೀ ಬಿ.ಕೆ ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲ್ ಸಂ:2368/2011 ಮತ್ತು ಇತರ ಸಿವಿಲ್ ಅಪೀಲುಗಳಲ್ಲಿ ದಿ:09.02.2017ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ, ಉಲ್ಲೇಖಿತ(1)ರ ದಿ:11.01.2018ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಉಪ ನಿರ್ದೇಶಕರ ವೃಂದದ ಹುದ್ದೆಗಳಿಗೆ ನೀಡಲಾದ ಪದೋನ್ನತಿಗಳನ್ನು ಪುನರಾವಲೋಕಿಸಿ ಪರಿಷ್ಕೃತ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲ್ ಸಂ:2368/2011 ಶ್ರೀ ಬಿ.ಕೆ ಪವಿತ್ರ ಮತ್ತು ಇತರರು ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ.ಸಂ:1151/2018ರಲ್ಲಿ ದಿ:10.05.2019ರಂದು ನೀಡಿದ ತೀರ್ಪಿನಲ್ಲಿ ಕರ್ನಾಟಕ ರಾಜ್ಯ ಪತ್ರದಲ್ಲಿ ದಿ:23.06.2018ರಂದು ಪ್ರಕಟಿಸಲಾದ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಯಲ್ಲಿನ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿರುವ ಸರ್ಕಾರಿ ನೌಕರರಿಗೆ ತತ್ಪರಿಣಾಮದ ಜೇಷ್ಠತೆಯನ್ನು ವಿಸ್ತರಿಸುವ ಅಧಿನಿಯಮ, 2017ರ ಸಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿದಿರುವುದರಿಂದ, 2017ರ ಅಧಿನಿಯಮದನ್ವಯ ಕ್ರಮ ತೆಗೆದುಕೊಳ್ಳುವ ಬಗ್ಗೆ ಉಲ್ಲೇಖ(2) ಮತ್ತು (3)ರ ದಿ:27.02.2019 ಮತ್ತು ದಿ:15.05.2019ರ ಸರ್ಕಾರದ ಆದೇಶಗಳಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ದಿ:11.01.2018ರಂದು ಹೊರಡಿಸಿರುವ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯ ಉಪ ನಿರ್ದೇಶಕರ ವೃಂದದ ಪರಿಷ್ಕೃತ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಉಲ್ಲೇಖ (2) ಮತ್ತು (3)ರ ಆದೇಶದ ಕಂಡಿಕೆ–8ರ ಉಪಖಂಡಿಕೆ (2)ರಲ್ಲಿ ಉಲ್ಲೇಖಿಸಲಾದ, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4ರಂತೆ ಪುನರಾವಲೋಕಿಸಿ, ಅವರುಗಳ ಜ್ಯೇಷ್ಠತೆಯನ್ನು ಪರಿಷ್ಕರಿಸಿ ದಿ:27.04.1978 ರಿಂದ ದಿ:31.12.2018ರವರೆಗಿನ ಅವಧಿಗೆ ದಿ:01.01.2019ರಲ್ಲಿದ್ದಂತೆ ಪರಿಷ್ಕೃತ ತಾತ್ಕಾಲಿಕ ಜ್ಯೇಷ್ಠತಾ

ಪಟ್ಟಿಯನ್ನು ಉಲ್ಲೇಖ(4)ರ ದಿ:26.07.2019ರ ಅಧಿಸೂಚನೆಯಲ್ಲಿ ಪ್ರಕಟಿಸಿ ಸದರಿ ಜ್ಯೇಷ್ಠತೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಇತರೆ ಸೇವಾ ವಿಷಯಗಳ ಬಗ್ಗೆ ಆಕ್ಷೇಪಣೆಗಳು ಇದ್ದಲ್ಲಿ ಬಾದಿತರಾದ ಅಧಿಕಾರಿ/ನೌಕರರು ಆಕ್ಷೇಪಣೆಗಳನ್ನು ಲಿಖಿತ ಮೂಲಕ 15 ದಿನಗಳೊಳಗಾಗಿ ಸಲ್ಲಿಸುವಂತೆ ಸೂಚಿಸಲಾಗಿತ್ತು. ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿ ಪ್ರಕಟಗೊಂಡ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು/ಸಲಹೆಗಳು ಸರ್ಕಾರದಲ್ಲಿ ಸ್ವೀಕೃತಗೊಂಡಿರುವುದಿಲ್ಲ.

ಪ್ರಸ್ತುತ ಪ್ರಕಟಿಸಿರುವ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲ್ ಸಂ:2368/2011 ಶ್ರೀ ಬಿ.ಕೆ. ಪವಿತ್ರ ಮತ್ತು ಇತರರು ವಿರುದ್ಧ ಕೇಂದ್ರ ಸರ್ಕಾರ ಮತ್ತು ಇತರರು ಮತ್ತು ಸಂಬಂಧಿಸಿದ ರಿವ್ಯೂ ಅರ್ಜಿ ಹಾಗೂ ರಿಟ್ ಅರ್ಜಿಗಳಲ್ಲಿನ ಪ್ರಕರಣ ಎಂ.ಎ.ಸಂ:1151/2018ರಲ್ಲಿ ದಿ:10.05.2019ರಂದು ನೀಡಿದ ತೀರ್ಪಿನಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ದಿ:27.02.2019 ಮತ್ತು 15.05.2019ರ ಸರ್ಕಾರದ ಆದೇಶಗಳಲ್ಲಿ ನೀಡಿರುವ ಸೂಚನೆಗಳನ್ವಯ ಪದೋನ್ನತಿಗಳನ್ನು ಪುನರಾವಲೋಕಿಸಿ ಜ್ಯೇಷ್ಠತೆಯನ್ನು ನಿರ್ಧರಿಸಲಾಗಿರುತ್ತದೆ. ಈ ರೀತಿ ಜ್ಯೇಷ್ಠತೆಯನ್ನು ನಿರ್ಧರಿಸುವಾಗ ಅಧಿಕೃತ ಜ್ಞಾಪನ ಸಂ:ಡಿಪಿಎಆರ್ 48 ಎಸ್ ಎಸ್ ಆರ್ 75, ದಿ:05.07.1976ರಲ್ಲಿ ನೀಡಿರುವ ಸೂಚನೆಗಳನ್ನು ಸಹ ಗಮನದಲ್ಲಿಟ್ಟುಕೊಂಡು ಜ್ಯೇಷ್ಠತೆಯನ್ನು ನಿಗದಿಪಡಿಸಲಾಗಿದೆ. ಅದರಂತೆ, ದಿ:01.01.2019ರಲ್ಲಿದ್ದಂತೆ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ. ಈ ಅಂತಿಮ ಜ್ಯೇಷ್ಠತಾ ಪಟ್ಟಿಯು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತರಬಹುದಾದ ತಿದ್ದುಪಡಿಗಳ ಹಾಗೂ ನ್ಯಾಯಾಲಯದ ತೀರ್ಪಿಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ. ಶಶಿಧರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು, ಇವರಿಗೆ ಮುಂದಿನ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸುವ ಸಲುವಾಗಿ ಕಳುಹಿಸಲಾಗಿದೆ.

**ಪ್ರತಿ:**

1) ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು.
2) ಸಂಬಂಧಪಟ್ಟ ಅಧಿಕಾರಿಗಳಿಗೆ– ನಿರ್ದೇಶಕರ ಮುಖಾಂತರ.
3) ಕಛೇರಿ ಪ್ರತಿ/ ಶಾಖಾರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಅಧಿಸೂಚನೆ ಸಂ.ಆಇ 83 ಕವಿಇ 2017, ದಿ:14-08-2019ರ ಅನುಬಂಧ

ಉಪ ನಿರ್ದೇಶಕರು

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ನೇರನೇಮಕಾತಿ/ ಮುಂಬಡ್ತಿ/ಇತರೆ | ಜನ್ಮ ದಿನಾಂಕ | ಸರ್ಕಾರಿ ಸೇವೆಗೆ ಸೇರಿದ ದಿನಾಂಕ | ಮುಂಬಡ್ತಿ ಹೊಂದಿದ ದಿನಾಂಕ | ನೇಮಕಾತಿ ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ | ನಿವೃತ್ತಿ/ಮುಂಬಡ್ತಿ ಹೊಂದಿದ ದಿನಾಂಕ | ಷರಾ |
|---|---|---|---|---|---|---|---|---|
| 1. | ಎಸ್.ಆರ್.ಟಿ ಆರಾಧ್ಯ | ಮುಂಬಡ್ತಿ | 15.04.1945 | 03.10.1968 | 12.12.1980 | 12.12.1980 | 30.04.2003 | ನಿವೃತ್ತಿ |
| 2. | ಡಿ. ನಾರಾಯಣಸ್ವಾಮಿ | ಮುಂಬಡ್ತಿ | 03.02.1936 | 06.11.1956 | 12.12.1980 | 12.12.1980 | 28.02.1994 | ನಿವೃತ್ತಿ |
| 3. | ಎನ್. ಚಂದ್ರಮೌಳಿ | ಮುಂಬಡ್ತಿ | 10.04.1932 | 01.10.1956 | 12.12.1980 | 12.12.1980 | 30.04.1990 | ನಿವೃತ್ತಿ |
| 4. | ಕೆ. ಮುತ್ತುಕುಮಾರ್ | ಮುಂಬಡ್ತಿ | 15.05.1933 | 01.10.1956 | 12.12.1980 | 12.12.1980 | 31.05.1991 | ನಿವೃತ್ತಿ |
| 5. | ಬಿ. ಆರ್. ರಾಮಲಿಂಗಪ್ಪ | ಮುಂಬಡ್ತಿ | 04.12.1931 | 28.04.1959 | 06.01.1981 | 06.01.1981 | 31.12.1989 | ನಿವೃತ್ತಿ |
| 6. | ಎ.ಸಿ. ಫ್ರಾನ್ಸಿಸ್ | ಮುಂಬಡ್ತಿ | 06.01.1931 | 08.05.1958 | 18.02.1981 | 18.02.1981 | 31.01.1989 | ನಿವೃತ್ತಿ |
| 7. | ಕೆ. ಬೊಮ್ಮಯ್ಯ (ಪ.ಜಾ) | ಮುಂಬಡ್ತಿ | 26.08.1935 | 09.11.1959 | 24.06.1985 | 24.06.1985 | 31.08.1993 | ನಿವೃತ್ತಿ |
| 8. | ಬಿ. ಸೌಭಾಗ್ಯ | ಮುಂಬಡ್ತಿ | 21.10.1933 | 20.10.1958 | 19.01.1990 | 19.01.1990 | 31.10.1991 | ನಿವೃತ್ತಿ |
| 9. | ಪಿ.ಎಸ್. ಶ್ರೀಪತಿ | ಮುಂಬಡ್ತಿ | 09.01.1933 | 17.09.1959 | 22.01.1991 | 22.01.1991 | 31.01.1991 | ನಿವೃತ್ತಿ |
| 10. | ಎಂ. ನರಸಿಂಹಶಾಸ್ತ್ರಿ | ಮುಂಬಡ್ತಿ | 21.01.1936 | 01.10.1960 | 10.02.1992 | 10.02.1992 | 31.01.1994 | ನಿವೃತ್ತಿ |
| 11. | ಎಂ. ಪಂಕಜಮ್ಮ | ಮುಂಬಡ್ತಿ | 06.12.1934 | 07.12.1953 | 10.02.1992 | 10.02.1992 | 31.12.1992 | ನಿವೃತ್ತಿ |
| 12. | ಆರ್. ಎಂ. ದೊಡ್ಡಮನಿ(ಪ.ಪಂ) | ಮುಂಬಡ್ತಿ | 11.08.1953 | 23.01.1984 | 26.05.1992 | 26.05.1992 | 11.07.2008 | ಮುಂಬಡ್ತಿ |
| 13. | ಡಿ. ಬಸವರಾಜು (ಪ.ಜಾ) | ಮುಂಬಡ್ತಿ | 01.06.1955 | 14.06.1984 | 27.05.1992 | 27.05.1992 | 30.06.2015 | ನಿವೃತ್ತಿ |
| 14. | ಹೆಚ್. ಎ. ಲಕ್ಷ್ಮೀ ನಾರಾಯಣ | ಮುಂಬಡ್ತಿ | 26.04.1937 | 18.04.1966 | 13.10.1993 | 13.10.1993 | 30.04.1995 | ನಿವೃತ್ತಿ |
| 15. | ಜಿ. ಜಿ. ನಾಯಕ್ | ಮುಂಬಡ್ತಿ | 27.09.1936 | 18.04.1966 | 14.02.1994 | 14.02.1994 | 30.09.1994 | ನಿವೃತ್ತಿ |
| 16. | ಕೆ. ಸಾವಿತ್ರಿ (ಪ.ಜಾ) | ಮುಂಬಡ್ತಿ | 22.06.1962 | 14.07.1988 | 14.02.1994 | 14.02.1994 | 21.12.2015 | ಮುಂಬಡ್ತಿ |
| 17. | ಎ. ದ್ವಾರಕಾನಾಥ್ | ಮುಂಬಡ್ತಿ | 27.09.1937 | 18.04.1966 | 03.03.1994 | 03.03.1994 | 30.09.1995 | ನಿವೃತ್ತಿ |
| 18. | ಬಿ. ರಾಮೇಗೌಡ | ಮುಂಬಡ್ತಿ | 15.05.1937 | 18.04.1966 | 01.01.1995 | 01.01.1995 | 31.05.1995 | ನಿವೃತ್ತಿ |

| ಕ್ರ. ಸಂ. | ಹೆಸರು ಶ್ರೀ/ಶ್ರೀಮತಿ | ನೇರನೇಮಕಾತಿ/ ಮುಂಬಡ್ತಿ/ಇತರೆ | ಜನ್ಮ ದಿನಾಂಕ | ಸರ್ಕಾರಿ ಸೇವೆಗೆ ಸೇರಿದ ದಿನಾಂಕ | ಮುಂಬಡ್ತಿ ಹೊಂದಿದ ದಿನಾಂಕ | ನೇಮಕಾತಿ ಜೇಷ್ಠತೆಗೆ ನೈಜವಾದ ಅರ್ಹತಾ ದಿನಾಂಕ | ನಿವೃತ್ತಿ/ಮುಂಬಡ್ತಿ ಹೊಂದಿದ ದಿನಾಂಕ | ಷರಾ |
|---|---|---|---|---|---|---|---|---|
| 19. | ಕೆ. ಎಸ್. ಶೇಷಾದ್ರಿ | ಮುಂಬಡ್ತಿ | 10.05.1937 | 21.04.1966 | 05.05.1995 | 05.05.1995 | 31.05.1995 | ನಿವೃತ್ತಿ |
| 20. | ಎಂ. ನರಸಿಂಹಯ್ಯ | ಮುಂಬಡ್ತಿ | 04.10.1940 | 20.04.1966 | 01.06.1995 | 01.06.1995 | 31.10.1998 | ನಿವೃತ್ತಿ |
| 21. | ಆರ್. ರಾಜಶೇಖರಯ್ಯ | ಮುಂಬಡ್ತಿ | 03.06.1938 | 01.06.1966 | 01.06.1995 | 01.06.1995 | 30.06.1996 | ನಿವೃತ್ತಿ |
| 22. | ಎಸ್. ಕೆ. ಕುಲಕರ್ಣಿ | ಮುಂಬಡ್ತಿ | 20.07.1961 | 19.01.1984 | 02.11.1995 | 02.11.1995 | 01.09.2016 | ಸ್ವ–ಇಚ್ಛಾ ನಿವೃತ್ತಿ |
| 23. | ಎಂ. ಕೆ. ಕೃಷ್ಣೇಗೌಡ | ಮುಂಬಡ್ತಿ | 06.06.1939 | 16.05.1966 | 26.06.1997 | 26.06.1997 | 30.06.1997 | ನಿವೃತ್ತಿ |
| 24. | ಬಿ. ಎಂ. ವೇಣುಗೋಪಾಲ್ | ಮುಂಬಡ್ತಿ | 15.08.1953 | 19.05.1973 | 21.10.2011 | 21.10.2011 | 31.08.2013 | ನಿವೃತಿ |
| 25. | ಹೆಚ್. ಟಿ. ಶಂಕರೇಗೌಡ | ಮುಂಬಡ್ತಿ | 18.08.1954 | 04.10.1976 | 27.12.2013 | 27.12.2013 | 31.08.2014 | ನಿವೃತ್ತಿ |
| 26. | ವಿಜಯ್‌ಕುಮಾರ್ ಎಸ್. ಕಳ್ಳೀಮನಿ (ಪ.ಜಾ) | ಮುಂಬಡ್ತಿ | 20.07.1974 | 05.03.1999 | 11.09.2014 | 11.09.2014 | – | – |
| 27. | ಕೆ. ಜ್ಯೋತಿಬಾಯಿ | ಮುಂಬಡ್ತಿ | 25.08.1955 | 19.10.1973 | 27.06.2015 | 27.06.2015 | 31.08.2015 | ನಿವೃತ್ತಿ |
| 28. | ಹೆಚ್.ಸಿ. ಲಕ್ಷ್ಮೀಕಾಂತನ್ (ಪ.ಜಾ) | ಮುಂಬಡ್ತಿ | 08.05.1957 | 26.11.1983 | 07.09.2015 | 07.09.2015 | 31.05.2017 | ನಿವೃತ್ತಿ |

(ಜಿ. ಶಶಿಧರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)